ಸಿಸಿ ಸಿದ್ದಾಪುರ ತಾಲ್ಲೂಕುಗಳಲ್ಲಿ ಮನೆಗಳನ್ನು ಮಾಡಿಂವ ಬಗ್ಗೆ

೮೭೦. ಶ್ರೀ ಗೋಪಾಲ ಮಂಕಂದ ಕಾನಡೆ (ಸಿಸಿ). —ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ ?

(ಅ) ಉತ್ತರ ಕನ್ನಡ ಜಿಲ್ಲಾ ಸಿಸಿ ಸಿದ್ದಾಪುರ ತಾಲ್ಲೂಕುಗಳಲ್ಲಿ ಕಂದಾಯ ಇಲಾಖೆಯ ಜಮೀನುಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

(ಆ) ಹಾಗಿದ್ದಲ್ಲಿ ಸದರಿ ನಿವೇಶನಗಳನ್ನು ಮಂಜೂರು ಮಾಡಲು ಏನು ಕ್ರಮ ತೆಗೆದುಕೊಳ್ಳಲಾಗಿದೆ,

(ಇ) ಈ ನಿವೇಶನಗಳನ್ನು ಪುಕ್ಕಟ್ಟೆಯಾಗಿ ಮಂಜೂರು ಮಾಡಲು ಸರಕಾರಕ್ಕೆ ಕೋರುವ ತೊಂದರೆಗಳೇನು,

(ಈ) ಈ ವಿಚಾರದಲ್ಲಿ ಮಂಜೂರು ಕೋರಿ ಬಂದಿರುವ ಅರ್ಜಿಗಳೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು).—

(ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

(ಆ) ಸರ್ಕಾರದ ಸುತ್ತೋಲೆ ಕ್ರ. ಆರ್‌ಡಿ ೫೨ ಎಲ್‌ಜಿಪಿ ೮೧, ದಿನಾಂಕ ೬-೮-೧೯೮೧ರ ಪರಿಮಿತಿಯಲ್ಲಿ ಬಂದಿರುವಂಥ ಸಿಸಿ ತಾಲ್ಲೂಕಿನ ೧೨೨ ಪ್ರಕರಣಗಳನ್ನು ಮತ್ತು ಸಿದ್ದಾಪುರ ತಾಲ್ಲೂಕಿನ ೧೮ ಪ್ರಕರಣಗಳನ್ನು ಕ್ರಮಬದ್ಧಗೊಳಿಸಿರುತ್ತದೆ. ಸದರಿ ಸುತ್ತೋಲೆಯ ಪರಿಮಿತಿಯಲ್ಲಿ ಬರದಿರುವ ಪ್ರಕರಣಗಳು ಬಾಕಿ ಉಳಿದಿರುತ್ತವೆ.

(ಇ) ಭೂ ಮಂಜೂರಾತಿ ನಿಯಮದಲ್ಲಿ ನಿವೇಶನಗಳನ್ನು ಪುಕ್ಕಟೆಯಾಗಿ ಮಂಜೂರು ಮಾಡುವ ಬಗ್ಗೆ ಅವಕಾಶವಿರುವುದಿಲ್ಲ.

(ಈ) ಸಿಸಿ ತಾಲ್ಲೂಕು ೩೭೪ ಸಿದ್ದಾಪುರ ೨೭
ಪ್ರಕರಣಗಳು ಮಂಜೂರಾತಿ ಕೋರಿ ಬಂದಿರುತ್ತವೆ.

ಬೀಡಿ ಕಾರ್ಮಿಕರ ವೇತನದ ಬಗ್ಗೆ

೨೫೮. ಶ್ರೀ ಎಂ.ಎಸ್.ಕೃಷ್ಣನ್,(ರಾಜಾಜಿನಗರ).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬೀಡಿ ಕಾರ್ಮಿಕರ ಮಾಲೀಕರ ನಡುವೆ ಒಪ್ಪಂದವಾಗಿ ವೇತನ ನಿಗದಿಯಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ ? ಇದರ ಪ್ರಕಾರ ಕನಿಷ್ಠ ವೇತನ ಎಷ್ಟು ? (ಒಪ್ಪಂದದ ತಾರೀಖು ತಿಳಿಸಿ)

(ಆ) ಬೀಡಿ ಕಾರ್ಮಿಕರಿಗೆ ಕಾನೂನಿನ ಅನ್ವಯ ಸರ್ಕಾರ ನಿಗದಿ ಮಾಡಿರುವ ಕನಿಷ್ಠ ಕೂಲಿಯೆಷ್ಟು, ಹಾಗೂ ಆ ಬಗ್ಗೆ ಹೊರಡಿಸಿರುವ ಸರ್ಕಾರಿ ಆಜ್ಞೆಯ ತಾರೀಖನ್ನು ತಿಳಿಸುವುದು ?

(ಇ) ಸಿನಿಮಾ ಹೋಟೆಲ್ ಉದ್ಯಮಗಳಲ್ಲಿ ಸರ್ಕಾರ ನಿಗದಿ ಮಾಡಿರುವ ಕನಿಷ್ಠ ಕೂಲಿ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಹಾಗೂ ಕಾರ್ಮಿಕ ಸಚಿವರು).—

(ಅ) ಹೌದು. ೨೬-೫-೧೯೮೫ರ ಒಪ್ಪಂದದ ಪ್ರಕಾರ ನಿಗದಿಯಾದ ವೇತನ ರೂ. ೮-೮೦ ಮತ್ತು ಗ್ರಾಹಕ ಬೆಲೆ ಸೂಚ್ಯಾಂಕದ ಪ್ರತಿ ಅಂಶ ಏರಿಕೆಗೆ ೨ ಪೈಸೆಯಂತೆ ತುಟ್ಟಿಭತ್ಯೆಯನ್ನು ನಿಗದಿ ಮಾಡಲಾಯಿತು. ೧೯೮೫ರ ಡಿಸೆಂಬರ್ ಕೊನೆವರೆಗೆ ಮೂಲ ವೇತನ ಮತ್ತು ತುಟ್ಟಿಭತ್ಯೆ ಸೇರಿ ರೂ. ೧೧-೪೮ ಆಗುತ್ತದೆ.

(ಆ) ಒಂದು ಸಾವಿರ ಬೀಡಿ ಸುತ್ತಲು ರೂ. ೧೧-೫೦ ಕನಿಷ್ಠ ವೇತನವನ್ನು ಅಧಿಸೂಚನೆ ಕ್ರಮಾಂಕ ಎಸ್‌ಡಬ್ಲ್ಯೂಎಲ್ ೬೧ ಎಲ್‌ಎಂಡಬ್ಯು ೮೨ ದಿನಾಂಕ ೨೫-೭-೧೯೮೬ರಲ್ಲಿ ನಿಗದಿಗೊಳಿಸಿದೆ.

ಇದಲ್ಲದೆ ೯೯೫೫ರ ಗ್ರಾಹಕ ಬೆಲೆ ಸೂಚ್ಯಂಕದ ಮೇಲೆ ಆಗುವ ಪ್ರತಿಯೊಂದು ಅಂಶದ ಹೆಚ್ಚಳಕ್ಕೆ ೨ ಪೈಸೆಯಂತೆ ತುಟ್ಟಿಭತ್ಯೆಯನ್ನು ನಿಗದಿಪಡಿಸಿದೆ ಇದು ೧-೪-೧೯೮೭ ರಿಂದ ಜಾರಿಗೆ ಬರುತ್ತದೆ.

(ಇ) ೧. ಸಿನಿಮಾದಲ್ಲಿ ರೂ. ೩೮೧-೮೫ ಕನಿಷ್ಠ ವೇತನ ನಿಗದಿಗೊಳಿಸಿದೆ (ಮಾಹಿತಿ).

೨. ಹೋಟೆಲ್ ಉದ್ಯಮದಲ್ಲಿ ರೂ. ೨೪೭-೦೦ ಕನಿಷ್ಠ ವೇತನ ನಿಗದಿಗೊಳಿಸಿದೆ (ಮಾಹಿತಿ)

ರಾಜ್ಯದಲ್ಲಿನ ರಿಮ್ಯಾಂಡ್ ಹೋಂಗಳ ಬಗ್ಗೆ

೩೬೭. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ರಿಮ್ಯಾಂಡ್ ಹೋಂಗಳಿವೆ (ಜಿಲ್ಲಾವಾರು ವಿವರಗಳನ್ನು ನೀಡುವುದು).

(ಆ) ಈ ರಿಮ್ಯಾಂಡ್ ಹೋಂಗಳಲ್ಲಿ ಪ್ರಯೋಜನ ಪಡೆಯುತ್ತಿರುವ ಒಟ್ಟು ಮಕ್ಕಳ ಸಂಖ್ಯೆ ಎಷ್ಟು ? (ಪ್ರತ್ಯೇಕವಾಗಿ ವಿವರಗಳನ್ನು ನೀಡುವುದು)

ಶ್ರೀ ಜೆ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

(ಅ) ರಾಜ್ಯದಲ್ಲಿ ಒಟ್ಟು ೨೨ ರಿಮ್ಯಾಂಡ್ ಹೋಂಗಳಿವೆ. (ಜಿಲ್ಲಾವಾರು ವಿವರಗಳನ್ನು ಲಗತ್ತಿಸಲಾಗಿದೆ).

(ಆ) ೩೨೨ ಮಕ್ಕಳು ಪ್ರಯೋಜನ ಪಡೆಯುತ್ತಿದ್ದಾರೆ. (ವಿವರಗಳನ್ನು ಲಗತ್ತಿಸಲಾಗಿದೆ).

ಪ್ರತಿಪ್ರೇಕ್ಷಣಾ ಗೃಹಗಳು–ಜಿಲ್ಲಾವಾರು

ಸಂಸ್ಥೆಯ ಹೆಸರು	ಸಂಸ್ಥೆಯಲ್ಲಿರುವ ಮಕ್ಕಳ ಸಂಖ್ಯೆ
ಬೆಂಗಳೂರು ಜಿಲ್ಲೆ	
೧ ಪ್ರತಿಪ್ರೇಕ್ಷಣಾ ಗೃಹ, ಬೆಂಗಳೂರು	೮೦
ತುಮಕೂರು ಜಿಲ್ಲೆ	
೨ ಪ್ರತಿಪ್ರೇಕ್ಷಣಾ ಗೃಹ, ತುಮಕೂರು	೧೦
ಮೈಸೂರು ಜಿಲ್ಲೆ	
೩ ಪ್ರತಿಪ್ರೇಕ್ಷಣಾ ಗೃಹ, ಮೈಸೂರು	೦೯
ಮಂಗಳೂರು ಜಿಲ್ಲೆ	
೪ ಪ್ರತಿಪ್ರೇಕ್ಷಣಾ ಗೃಹ, ಮಂಗಳೂರು	೦೨
ಕೋಲಾರ ಜಿಲ್ಲೆ	
೫ ಪ್ರತಿಪ್ರೇಕ್ಷಣಾ ಗೃಹ, (ಕೋಲಾರ) ಕೆ.ಜಿ.ಎಫ್.	೧೩
ಗುಲ್ಬರ್ಗಾ ಜಿಲ್ಲೆ	
೬ ಪ್ರತಿಪ್ರೇಕ್ಷಣಾ ಗೃಹ, ಗುಲ್ಬರ್ಗ	೨೨